ಅನುಭವ ಕಥನ

# ಮರಳುಗಾಡಿನ ಓಯಸಿಸ್



**ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ**

ಕಲೆ: ವೆಂಕಟ್ರಮಣ ಭಟ್



ನಾನು ಹತ್ತು ವರ್ಷಗಳ ಹಿಂದೆ ಆಗಸ್ಟ್ ತಿಂಗಳ ಶುಕ್ರವಾರ ಮಸ್ಕತ್‌ನ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಸೂರ್ಯ ನೆತ್ತಿಯ ಮೇಲಿದ್ದ. ಆಗಸ್ಟ್ ತಿಂಗಳೆಂದರೆ ಶ್ರಾವಣ ಮಾಸ, ಜಿಟಿ ಪಿಟಿ ಜಡಿಮಳೆ, ತಂಪಾದ ವಾತಾವರಣದ ಕಲ್ಪನೆಯಲ್ಲಿದ್ದ ನನ್ನನ್ನು ಅದಕ್ಕೆ ತದ್ವಿರುದ್ಧವಾದ ಸುಡುಬೇಸಿಗೆಯ ಮಸ್ಕತ್‌ನ ಧಗೆ ಸ್ವಾಗತಿಸಿತು. ನಮ್ಮ ಊರಿನಲ್ಲಿ ಮೋಡಗಳ ಹಿಂದೆ ಮರೆಯಾಗಿದ್ದ ಸೂರ್ಯ, ನೇರ ಇಲ್ಲಿಗೇ ಬಂದಿಳಿದಿದ್ದಾನೆಂದು ಅನಿಸಿತು. ಸೂರ್ಯ ಇಲ್ಲಿ ಭೂಮಿಯನ್ನೇ ಬಾಂಡ್ಲಿ ಮಾಡಿಕೊಂಡು ರಸ್ತೆ, ಗುಡ್ಡ, ಜನ ಎಲ್ಲವನ್ನೂ ತನ್ನ ಶಾಖದಿಂದ ಹುರಿಯುತ್ತಿದ್ದ. ಬೆಂಗಳೂರಿನ ಚುಮುಚುಮು ಚಳಿ, ನವಿರಾದ ಎಳೆಯ ಬಿಸಿಲಿಗೆ ಒಗ್ಗಿಕೊಂಡಿದ್ದ ದೇಹವನ್ನು ಈಗ ನಲವತ್ತೆರಡು ಡಿಗ್ರಿ ಉಷ್ಣಾಂಶಕ್ಕೆ ಹೊಂದಿಸುವ ಸವಾಲು ನನಗೆದುರಾಗಿತ್ತು. ಗೂಡಿನಿಂದ ಹೊರಗೆ ಸ್ವತಂತ್ರವಾಗಿ ಹಾರಲು ಹೊರಟ ಮರಿಪಕ್ಷಿಯಂತೆ ನನ್ನ ಮನಸ್ಸು ಅಳುಕು, ಹಿಂಜರಿಕೆ, ಅವ್ಯಕ್ತ ಭಯದಿಂದ ಗೊಂದಲದ ಗೂಡಾಗಿತ್ತು. ನಗುತ್ತಾ ಸ್ವಾಗತಿಸಿದ ಡ್ರೈವರ್ ಸೈನುದ್ದೀನ್, ಕಾರಿನಲ್ಲಿ ನನ್ನನ್ನು ಕುಳ್ಳಿರಿಸಿಕೊಂಡು, ಅಲ್ಲಿಂದ ಮೂವತ್ತು ಕಿಲೋಮೀಟರ್ ದೂರದ 'ಬದರ್ ಆಲ್ ಸಮಾ' ನಾಮಾಂಕಿತ ಆಸ್ಪತ್ರೆಯ ಕಡೆಗೆ ವಾಹನವನ್ನು ತಿರುಗಿಸಿದ.

ನುಣುಪಾದ ಕೆನ್ನೆಯಂತೆ, ಬೈತಲೆಯಂತೆ ನೇರವಾಗಿರುವ, ಒಂದು ಕಸಕಡ್ಡಿಯೂ ಕಾಣದಂತೆ ಪೊರಕೆಯಿಂದ ಗುಡಿಸಿದ್ದಾರೇನೋ ಎನ್ನುವಷ್ಟು ಸ್ವಚ್ಛವಾಗಿರುವ ವಿಶಾಲ ರಸ್ತೆಗಳು, ಅಷ್ಟೇ ವಿಶಾಲವಾದ ಪಾದಚಾರಿ ಮಾರ್ಗ, ರಸ್ತೆ ಮಧ್ಯೆಯಿರುವ